**ಓ.ಎಸ್. ನಂಃ 386/2023**

**ಪಿ.ಡಬ್ಲ್ಯೂಃ 1**

**ದಿನಾಂಕ 20.02.2025 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿಯ ಪರಃ ಶ್ರೀ ಕೆ.ಬಿ.ಜಿ ವಕೀಲರಿಂದಃ**

14. ನನ್ನ ತಾತನ ಕಾರೇಗೌಡರ ಮರಣ ಪ್ರಮಾಣ ಪತ್ರವನ್ನು ನಾನೇ ಪಡೆದುಕೊಂಡಿರುತ್ತೇನೆ. ನನ್ನ ತಾತನಾದ ಕಾರೀಗೌಡ @ ಕರೀಗೌಡರವರ ತಂದೆಯ ಹೆಸರು ಕೆಂಪೇಗೌಡ @ ಮಾಯಿಗೌಡ ಎಂದರೆ ಸರಿ. ನಿಪಿ.13 ರ ದಾಖಲೆಯ 6 ನೇ ಕಾಲಂನಲ್ಲಿ ಮೃತಪಟ್ಟವರ ತಂದೆಯ/ಗಂಡನ ಹೆಸರಿನ ಕಾಲಂನಲ್ಲಿ ಮಾಯಿಗೌಡ ಇರುವ ಹೆಸರನ್ನು ಕೆರೆದು ಕೆಂಪೇಗೌಡ ಎಂದು ತಿದ್ದುಪಡಿ ಮಾಡಲಾಗಿರುತ್ತದೆ ಎಂದರೆ ಸರಿಯಲ್ಲ.

15. ವಾದಿಯು ಪೌತಿ ಆಧಾರದ ಮೇಲೆ ದಾವಾ ಆಸ್ತಿಯನ್ನು ತಮ್ಮ ಹೆಸರಿಗೆ ವರ್ಗಾವಣೆ ಮಾಡಿರುವುದನ್ನು ರದ್ದುಪಡಿಸುವಂತೆ ಹಾಗೂ ಕಾರೀಗೌಡರು 3 ನೇ ಪ್ರತಿವಾದಿಯ ಹೆಸರಿಗೆ ಮಾಡಿದ ವೀಲುನಾಮೆಯ ಆಧಾರದ ಮೇಲೆ ದಾವಾ ಆಸ್ತಿಯನ್ನು ತಮ್ಮ ಹೆಸರಿಗೆ ವರ್ಗಾವಣೆ ಮಾಡುವಂತೆ 3 ನೇ ಪ್ರತಿವಾದಿಯು ಹುಣಸೂರಿನ ಉಪವಿಭಾಗಾಧಿಕಾರಿಯವರ ಕಚೇರಿಯಲ್ಲಿ ಆರ್.ಎ ಸಂಖ್ಯೆ 130/2021 ರಂತೆ ಮೇಲ್ಮನವಿಯನ್ನು ಸಲ್ಲಿಸಿದ್ದರು ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ಸದರಿ ಪ್ರಕರಣದ ನೋಟಿಸು ವಾದಿಗೆ ಮುಟ್ಟಿರುತ್ತದೆ ಎಂದರೆ ಸಾಕ್ಷಿಯು ವಾದಿಗೆ ಅನಾರೋಗ್ಯವಿದ್ದು ಅವರು ಬೆಂಗಳೂರಿನಲ್ಲಿ ಚಿಕಿತ್ಸೆ ಪಡೆಯುತ್ತಿದ್ದು, ಅವರಿಗೆ ಸದರಿ ಪ್ರಕರಣದ ನೋಟಿಸು ಮುಟ್ಟಿರುತ್ತದೆಯೋ ಇಲ್ಲವೋ ನನಗೆ ಗೊತ್ತಿಲ್ಲ ಎಂದು ಸಾಕ್ಷಿಯು ನುಡಿದಿರುತ್ತಾರೆ.

16. ಸುಮಾರು 3 ರಿಂದ 4 ವರ್ಷಗಳ ಕಾಲ ವಾದಿಯು ನಿರಂತರವಾಗಿ ಚಿಕಿತ್ಸೆಯನ್ನು ಪಡೆಯುತ್ತಿದ್ದರು. ವಾದಿಯು ಆ ಸಮಯದಲ್ಲಿ ಆಸ್ಪತ್ರೆಯು ವಾದಿಯು ದಾಖಲಾಗಿರಲಿಲ್ಲ ಎಂದರೆ ಸರಿಯಲ್ಲ. ಆರ್.ಎ ಸಂಖ್ಯೆ 130/2021 ರಂತೆ ಮೇಲ್ಮನವಿಯ ನೋಟಿಸು ವಾದಿಗೆ ತಲುಪಿದ್ದರೂ ಸಹ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರ್.ಎ ಸಂಖ್ಯೆ 130/2021 ರಲ್ಲಿ 3 ನೇ ಪ್ರತಿವಾದಿಯ ಪರ ಆದೇಶವಾಗಿರುತ್ತದೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ.

17. ದಾವಾ ಆಸ್ತಿಯ ಖಾತೆಯನ್ನು ಪೌತಿ ಆಧಾರದ ಮೇಲೆ ವಾದಿಯ ಹೆಸರಿಗೆ ವರ್ಗಾವಣೆ ಮಾಡಲು ದಾವಾ ಆಸ್ತಿಯ ಪಹಣಿಗೆ ತಾಳೆಯಾಗುವಂತೆ ಮಾಯಿಗೌಡರ ಮರಣ ಪ್ರಮಾಣ ಪತ್ರದಲ್ಲಿ ಅವರ ಹೆಸರು ಕೆಂಪೇಗೌಡ ಎಂದು ತಿದ್ದುಪಡಿ ಮಾಡಿ ಸದರಿ ಮರಣ ಪ್ರಮಾಣ ಪತ್ರವನ್ನು ಖಾತೆ ಬದಲಾವಣೆ ಅರ್ಜಿಯೊಂದಿಗೆ ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ.

18. ಆರ್.ಎ ಸಂಖ್ಯೆ 130/2021 ರಲ್ಲಿ ಆದ ಆದೇಶದ ಪ್ರಕಾರ 3 ನೇ ಪ್ರತಿವಾದಿಯ ಹೆಸರಿಗೆ ದಾವಾ ಆಸ್ತಿಯ ಖಾತೆಯನ್ನು ವರ್ಗಾವಣೆ ಮಾಡಬಹುದು ಎಂದು ತಹಸೀಲ್ದಾರವರು ಹಿಂಬರಹ ನೀಡಿರುತ್ತಾರೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. 3 ನೇ ಪ್ರತಿವಾದಿಯು ನೀಡಿದ ಮಾಯಿಗೌಡರ ಮರಣ ಪ್ರಮಾಣ ಪತ್ರವು ಸರಿಯಾಗಿದೆ ಎಂದು ಸಹ ತಹಸೀಲ್ದಾರವರು ತಮ್ಮ ಹಿಂಬರಹದಲ್ಲಿ ನಮೂದಿಸಿರುತ್ತಾರೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. 3 ನೇ ಪ್ರತಿವಾದಿಯು ದಾವಾ ಆಸ್ತಿಯ ಸ್ವಾಧೀನದಲ್ಲಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನಾವೇ ದಾವಾ ಆಸ್ತಿಯ ಸ್ವಾಧೀನದಲ್ಲಿರುತ್ತೇವೆ ಎಂದು ನುಡಿದಿರುತ್ತಾರೆ.

19. ನನ್ನ ತಾತನಾದ ಕಾರೀಗೌಡರು 3 ನೇ ಪ್ರತಿವಾದಿಯ ಹೆಸರಿಗೆ ದಾವಾ ಆಸ್ತಿಯನ್ನು ವೀಲುನಾಮೆಯ ಮೂಲಕ ಕೊಟ್ಟಿರುವ ಕಾರಣ 3 ನೇ ಪ್ರತಿವಾದಿಯೇ ದಾವಾ ಆಸ್ತಿಯ ಮಾಲೀಕ ಮತ್ತು ಸ್ವಾಧೀನದಾರರಾಗುತ್ತಾರೆ ಎಂದರೆ ಸರಿಯಲ್ಲ. ವೀಲುನಾಮೆಯ ಮೂಲಕ ದಾವಾ ಆಸ್ತಿಯು ತಮ್ಮ ಹೆಸರಿಗೆ ಬಂದ ದಿನದಿಂದಲೂ 3 ನೇ ಪ್ರತಿವಾದಿಯೇ ದಾವಾ ಆಸ್ತಿಯ ಮಾಲೀಕ ಮತ್ತು ಸ್ವಾಧೀನದಾರನಾಗಿದ್ದು, ನಮಗೆ ದಾವಾ ಆಸ್ತಿಯಲ್ಲಿ ಹಕ್ಕು ಇಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯು ನನ್ನ ತಾತನಾದ ಕಾರೀಗೌಡರ ಸ್ವಯಾರ್ಜಿತ ಆಸ್ತಿಯಾಗಿದ್ದು, 3 ನೇ ಪ್ರತಿವಾದಿ ಕಾರೀಗೌಡರ ಸೇವೆ ಮಾಡಿದ ಕಾರಣ ಕಾರೀಗೌಡರು ಸ್ವಇಚ್ಛೆಯಿಂದ ವೀಲುನಾಮೆಯ ಮೂಲಕ ದಾವಾ ಆಸ್ತಿಯನ್ನು 3 ನೇ ಪ್ರತಿವಾದಿಗೆ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ.

20. ವಾದಿಯೇ ದಾವಾ ಆಸ್ತಿಯ ಸ್ವಾಧೀನದಲ್ಲಿರುತ್ತಾರೆ ಎಂದು ತೋರಿಸಲು ದಾವಾ ಆಸ್ತಿಯ ಅಕ್ಕಪಕ್ಕದ ಜಮೀನಿನ ಮಾಲೀಕರನ್ನು ನ್ಯಾಯಾಲಯದಲ್ಲಿ ಕರೆದು ಸಾಕ್ಷಿ ನುಡಿಸಲು ನಮಗೆ ಯಾವುದೇ ತೊಂದರೆ ಇಲ್ಲ. ಈ ದಾವೆಯನ್ನು ಹೂಡುವ ಪೂರ್ವದಲ್ಲಿ ನ್ಯಾಯ ಪಂಚಾಯಿತಿ ಮಾಡಿಸಿರುತ್ತಾರೆ ಎಂದು ವಾದಪತ್ರದಲ್ಲಿ ನಮೂದಾಗಿದ್ದು, ಸದರಿ ನ್ಯಾಯ ಪಂಚಾಯಿತಿಯನ್ನು ಎಲ್ಲಿ ಮಾಡಿರುತ್ತಾರೆ ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ಈ ದಾವೆಯನ್ನು ಹೂಡುವ ಪೂರ್ವದಲ್ಲಿ ವಾದಿ ಮತ್ತು ಪ್ರತಿವಾದಿಯರ ಮದ್ಯೆ ಯಾವುದೇ ನ್ಯಾಯ ಪಂಚಾಯಿತಿ ಆಗಿರುವುದಿಲ್ಲ ಎಂದರೆ ಸರಿ. ಈ

ದಾವೆಯನ್ನು ಹೂಡುವ ಪೂರ್ವದಲ್ಲಿ ವಾದಿ ಮತ್ತು ನಾವು ಪ್ರತಿವಾದಿಯರ ವಿರುದ್ಧ ಪೋಲಿಸ್ ಠಾಣೆಯಲ್ಲಿ ಯಾವುದೇ ದೂರನ್ನು ನೀಡಿರುವುದಿಲ್ಲ ಎಂದರೆ ಸರಿ. ಆದ್ದರಿಂದ ಪೋಲಿಸ್ ಠಾಣೆಯಲ್ಲಿ ಪ್ರತಿವಾದಿಯರ ವಿರುದ್ಧ ದೂರನ್ನು ನೀಡಿರುವುದಾಗಿ ವಾದಪತ್ರದಲ್ಲಿ ನಮೂದಿಸಿರುವ ದಿನಾಂಕ ಸುಳ್ಳು ಎಂದರೆ ಸರಿ. ವಾದಿಗೆ ಮತ್ತು ದಾವಾ ಆಸ್ತಿಗೂ ಯಾವುದೇ ಸಂಬಂಧವಿಲ್ಲದಿದ್ದರೂ ಸಹ 3 ನೇ ಪ್ರತಿವಾದಿಗೆ ಸೇರಿದ ದಾವಾ ಆಸ್ತಿಯನ್ನು ಕಬಳಿಸುವ ಉದ್ದೇಶದಿಂದ ನಾವು ಸುಳ್ಳು ದಾವೆಯನ್ನು ಹೂಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 3 ನೇ ಪ್ರತಿವಾದಿಯ ಹೆಸರಿಗೆ ಕಾರೀಗೌಡರು ವೀಲುನಾಮೆ ಮಾಡಿರುವ ವಿಷಯವನ್ನು ವಾದಿ ನನಗೆ ಎಂದಿಗೂ ಸಹ ಹೇಳಿರುವುದಿಲ್ಲ. ಕಾರಿಗೌಡರು 3 ನೇ ಪ್ರತಿವಾದಿಗೆ ದಾವಾ ಆಸ್ತಿಯ ಸಂಬಂಧ ಮಾಡಿಕೊಟ್ಟ ವೀಲುನಾಮೆಯು ಕಾನೂನು ಬದ್ಧವಾಗಿದ್ದು, ಸದರಿ ವೀಲುನಾಮೆಯ ಪ್ರಕಾರ 3 ನೇ ಪ್ರತಿವಾದಿಯ ದಾವಾ ಆಸ್ತಿಯ ಮಾಲೀಕರಾಗಿರುತ್ತಾರೆ ಎಂದರೆ ಸರಿಯಲ್ಲ. ನಿಮಗೆ ಈ ದಾವೆಯ ಬಗ್ಗೆ ಯಾವುದೇ ಮಾಹಿತಿ ಇಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ನಮ್ಮತಾತನ ಆಸ್ತಿ ನಮಗೆ ಬರಬೇಕೆಂದು ಹೇಳಿರುತ್ತೇವೆ ಎಂದು ಸ್ವತಃ ನುಡಿದಿರುತ್ತಾರೆ.

**ಮರುವಿಚಾರಣೆ ಇಲ್ಲ.**

(ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

**ಓ. ಹೇ. ಕೇ. ಸರಿ ಇದೆ.**

**ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ**
**ನ್ಯಾಯಾಧೀಶರು, ಕೆ.ಆರ್.ನಗರ.**